"ಮಧುರ ಮಕ್ಕಳೇ - ತಮ್ಮ ಆಂತರ್ಯದಲ್ಲಿ ಯಾವುದೇ ಭೂತಗಳಿಲ್ಲವೆಂದು ತಮ್ಮ ಮನಸ್ಸೆಂಬ ದರ್ಪಣದಲ್ಲಿ ನೋಡಿಕೊಳ್ಳಬೇಕು, ಭೂತಗಳನ್ನು ದೂರ ಮಾಡುವ ಪ್ರಯತ್ನ ಮಾಡುತ್ತಿರಬೇಕು"

ಪ್ರಶ್ನೆ: ತಂದೆ ಮಕ್ಕಳ ಮಧ್ಯ, ಸಂಗಮದಲ್ಲಿ ಈ ಜಗತ್ತಿನಿಂದ ಸಂಪೂರ್ಣ ಭಿನ್ನವಾದ ಪದ್ಧತಿ ನಡೆಯುತ್ತದೆ, ಅದು ಯಾವುದು?

ಉತ್ತರ: ಈ ಜಗತ್ತಿನಲ್ಲಿ ಮಕ್ಕಳು ತಂದೆಗೆ ನಮಸ್ತೆ ಮಾಡುತ್ತಾರೆ, ಆದರೆ ಇಲ್ಲಿ ತಂದೆ ಮಕ್ಕಳಿಗೆ ನಮಸ್ತೆ ಮಾಡುತ್ತಾರೆ. ಸ್ವಯಂ ತಂದೆಯೇ ಮಧುರ ಮಕ್ಕಳೇ ನಾನು ನಿಮ್ಮ ಸೇವೆಯಲ್ಲಿ ಉಪಸ್ತಿತನಾಗಿದ್ದೇನೆ, ನೀವು ಮಕ್ಕಳು ನನಗಿಂತಲೂ ಶ್ರೇಷ್ಠರಾಗಿದ್ದೀರೆಂದು ತಿಳಿಸುತ್ತಿದ್ದಾರೆ. ಎರಡನೇಯದಾಗಿ ನಾನು ನಿರಹಂಕಾರಿ, ನಿರಾಕಾರಿ ತಂದೆಯಾಗಿದ್ದೇನೆ, ಆದುದರಿಂದ ನಾನೇ ಮೊದಲು ನಿಮಗೆ ನಮಸ್ತೆ ಮಾಡುತ್ತೇನೆ. ಇದೂ ಸಹ ಸಂಗಮಯುಗದ ವಿಚಿತ್ರ ಪದ್ಧತಿಯಾಗಿದೆ.

ಗೀತೆ: ಎದ್ದೇಳಿ ಪ್ರಿಯತಮೆಯರೇ ಎದ್ದೇಳಿ......... ಎಷ್ಟೊಂದು ಉತ್ತಮ ಯಾಗಿದೆ.

ಓಂ ಶಾಂತಿ. ಇಲ್ಲಿಗೆ ಬಂದಾಗ ಮೊದಲು ತಂದೆಯು ಮಕ್ಕಳಿಗೆ ನಮಸ್ತೆ ಮಾಡಬೇಕೋ ಅಥವಾ ಮಕ್ಕಳು ತಂದೆಗೆ ನಮಸ್ತೆ ಮಾಡಬೇಕೋ? (ಮಕ್ಕಳು ತಂದೆಗೆ ಮಾಡಬೇಕು) ಇಲ್ಲ, ಮೊದಲು ತಂದೆಯು ನಮಸ್ತೆ ಮಾಡಬೇಕಾಗುವುದು. ಸಂಗಮಯುಗದ ಪದ್ಧತಿಯು ಎಲ್ಲಕ್ಕಿಂತಲೂ ವಿಚಿತ್ರವಾಗಿದೆ. ಸ್ವಯಂ ತಂದೆ ತಿಳಿಸುತ್ತಾರೆ - ನಾನು ಎಲ್ಲರಿಗೂ ತಂದೆಯಾಗಿ ನಿಮ್ಮ ಸೇವೆಯಲ್ಲಿ ಬಂದು ಉಪಸ್ತಿತನಾಗಿದ್ದೇನೆ, ಆದುದರಿಂದ ಅಗತ್ಯವಾಗಿ ಮಕ್ಕಳು ನನಗಿಂತ ಶ್ರೇಷ್ಠರಾದರಲ್ಲವೇ. ಪ್ರಪಂಚದಲ್ಲಂತೂ ಮಕ್ಕಳು ತಂದೆಗೆ ನಮಸ್ತೆ ಮಾಡುತ್ತಾರೆ. ಇಲ್ಲಿತಂದೆ ಮಕ್ಕಳಿಗೆ ನಮಸ್ತೆ ಮಾಡುತ್ತಾರೆ. ಪರಮಾತ್ಮನಿಗೆ ನಿರಾಕಾರಿ, ನಿರಹಂಕಾರಿ ಎಂಬ ಗಾಯನವಿದೆ ಎಂದಾಗ ಅದನ್ನು ತೋರ್ಪಡಿಸಬೇಕಾಗುತ್ತದೆ. ಅವರಂತೂ ಸನ್ಯಾಸಿಗಳ ಚರಣಗಳಿಗೆ ಬಾಗುತ್ತಾರೆ, ಪಾದಗಳನ್ನು ಸ್ಪರ್ಶ ಮಾಡುತ್ತಾರೆ, ಆದರೆ ಏನೂ ತಿಳಿದುಕೊಂಡಿಲ್ಲ. ತಂದೆ ಕಲ್ಪದ ನಂತರ ಮಕ್ಕಳ ಜೊತೆ ಮಿಲನ ಮಾಡಲು ಬರುತ್ತಾರೆ. ನೀವು ತುಂಬಾ ಅಗಲಿ ಹೋಗಿರುವಂತಹ ಮಕ್ಕಳಾಗಿದ್ದೀರಿ. ಆದುದರಿಂದ ನೀವು ಮಧುರ ಮಕ್ಕಳು ಧಣಿದಿದ್ದೀರೆಂದು ತಂದೆಯೂ ಹೇಳುತ್ತಾರೆ. ದ್ರೌಪತಿಯ ಪಾದಗಳನ್ನು ಒತ್ತುವುರೆಂದಾಗ ಸೇವಕರಾದರಲ್ಲವೇ. "ವಂದೇ-ಮಾತರಂ" ಎಂದು ಯಾರು ಉಚ್ಚರಿಸಿದರು? ತಂದೆಯು ಉಚ್ಚರಿಸಿದರು. ಇಡೀ ಸೃಷ್ಟಿಯ ಬೇಹದ್ದಿನ ಸೇವೆಗಾಗಿ ತಂದೆ ಬಂದಿದ್ದಾರೆಂದು ಮಕ್ಕಳು ತಿಳಿದುಕೊಂಡಿದ್ದೀರಿ. ಈ ಸೃಷ್ಟಿಯ ಮೇಲೆ ಎಷ್ಟೊಂದು ಕೊಳಕು ಇದೆ, ಇದು ನರಕವಾಗಿದೆ. ತಂದೆಯು ನರಕವನ್ನು ಸ್ವರ್ಗವನ್ನಾಗಿ ಮಾಡಲು ಬರಬೇಕಾಗುತ್ತದೆ. ತುಂಬಾ ಪ್ರೀತಿಯಿಂದ ಬರುತ್ತಾರೆ. ನಾನು ಮಕ್ಕಳ ಸೇವೆಯಲ್ಲಿ ಹೋಗಬೇಕೆಂದು ತಿಳಿದುಕೊಳ್ಳುತ್ತಾರೆ. ಕಲ್ಪ-ಕಲ್ಪವು ತಂದೆಯು ಮಕ್ಕಳ ಸೇವೆಯಲ್ಲಿ ಉಪಸ್ಥಿತರಾಗುತ್ತಾರೆ. ಇಲ್ಲಿ ಒಂದೇ ಕಡೆ ಕುಳಿತು ಎಲ್ಲಾ ಮಕ್ಕಳ ಸೇವೆ ಮಾಡಿ ಬಿಡುತ್ತಾರೆ, ಎಲ್ಲರ ಬಳಿ ಹೋಗುವ ಅವಶ್ಯಕತೆ ಇರುವುದಿಲ್ಲ. ಇಡೀ ವಿಶ್ವದ ಕಲ್ಯಾಣಕಾರಿ ದಾತ ಒಬ್ಬರೇ ಆಗಿದ್ದಾರೆ. ಅವರ ಹೋಲಿಕೆಯಲ್ಲಿ ಮನುಷ್ಯರು ಯಾರೂ ಸಹ ಇಂತಹ ಸೇವೆಯನ್ನು ಮಾಡಲು ಸಾಧ್ಯವಿಲ್ಲ. ತಂದೆಯ ಸೇವೆ ಬೇಹದ್ದಿನ ಸೇವೆ ಆಗಿದೆ. ಹೊಸ ಯುಗವನ್ನು ಕುಳಿತು ತಿಳಿಸಿ ಕೊಡಬೇಕು. ಈ ಯುಗಗಳು ಭಾರತೀಯರಿಗೋಸ್ಕರವಾಗಿದೆ. ಭಾರತವಾಸಿಯರಿಂದ ಅವರು ಈ ಮಾತನ್ನು ಕೇಳುತ್ತಾರೆ ಸತ್ಯಯುಗ, ತ್ರೇತಾಯುಗದಲ್ಲಿ ಭಾರತವಾಸಿಯರೇ ಇದ್ದು ಹೋಗಿದ್ದಾರೆ, ಏಕೆಂದರೆ ಬೇರೆಯವರು ದ್ವಾಪರದಿಂದ ಬರುತ್ತಾರೆ. ಆದುದರಿಂದ ಅವರು ಬೇರೆಯವರಿಂದ ಭಾರತದ ಪ್ರಾಚೀನ ಖಂಡವೆಂದು, ಅಲ್ಲಿ ದೇವತೆಗಳು ರಾಜ್ಯ ಮಾಡುತ್ತಿದ್ದರೆಂದು ಕೇಳುತ್ತಾರೆ. ಆದಿ ಸನಾತನ ದೇವೀ-ದೇವತಾ ಧರ್ಮವಿತ್ತು, ಅದು ಈಗ ಇಲ್ಲದಂತಾಗಿದೆ. ಗೀತೆಯು ದೇವೀ-ದೇವತಾ ಧರ್ಮದ ತಾಯಿ ತಂದೆಯಾಗಿದೆ. ಉಳಿದೆಲ್ಲವೂ ನಂತರ ಬರುತ್ತವೆ. ಇದು ಎಲ್ಲಾ ಧರ್ಮಗಳಿಗೂ ಪ್ರಾಚೀನವಾಗಿದೆ. ವಾಸ್ತವಿಕವಾಗಿ ಗೀತೆಯೊಂದೇ ಮುಖ್ಯವಾಗಿತ್ತು. ಅದನ್ನು ಎಲ್ಲರೂ ಸಮ್ಮತಿಸಬೇಕಾಗುತ್ತದೆ. ಆದರೆಎಲ್ಲರೂ ಸಮ್ಮತಿಸುವುದಿಲ್ಲ. ಪ್ರತಿಯೊಬ್ಬರೂ ತಮ್ಮ ಧರ್ಮ ಶಾಸ್ತ್ರವನ್ನು ಮಾತ್ರ ಒಪ್ಪಿಕೊಳ್ಳುತ್ತಾರೆ. ಭಗವಂತ ಗೀತೆಯನ್ನು ಯಾವಾಗ ಹೇಳಲಾಯಿತೆಂದು ತಿಳಿದುಕೊಂಡಿಲ್ಲ? ಗೀತೆಯನ್ನು ತಂದೆಯೇ ತಿಳಿಸಿದ್ದಾರೆ. ಅದರಲ್ಲಿ ತಂದೆಯ ಬದಲಿಗೆ ಮಗನ ಹೆಸರನ್ನು ಹಾಕಿ ಕಷ್ಟ ಮಾಡಿ ಬಿಟ್ಟಿದ್ದಾರೆ. ಆದುದರಿಂದ ಶಿವರಾತ್ರಿ ಯಾವಾಗ ಆಚರಿಸಬೇಕೆಂದು ಸಿದ್ಧವಾಗುವುದಿಲ್ಲ. ಶಿವ ಜಯಂತಿ ನಂತರ ಕೃಷ್ಣ ಜಯಂತಿ ಆಗುತ್ತದೆ. ಶ್ರೀಕೃಷ್ಣನ ಯಜ್ಞವೆಂದು ಎಂದಿಗೂ ಹೇಳಲಾಗುವುದಿಲ್ಲ. ರುದ್ರ ಜ್ಞಾನ ಯಜ್ಞವೆಂದು ಹೇಳಲಾಗುತ್ತದೆ. ರುದ್ರ ಯಜ್ಞದಿಂದಲೇ ವಿನಾಶದ ಜ್ವಾಲೆ ಪ್ರಜ್ವಲಿತವಾಯಿತೆಂದು ಹೇಳಲಾಗುತ್ತದೆ, ಅದನ್ನು ನೀವೀಗ ನೋಡುತ್ತಿದ್ದೀರಿ. ಆದಿ ಸನಾತನ ದೇವೀ-ದೇವತಾ ಧರ್ಮ ಪುನಃ ಸ್ಥಾಪನೆಯಾಗುತ್ತಿದೆ, ಮತ್ತೆ ಇವೆಲ್ಲಾ ಅನೇಕ ಧರ್ಮಗಳು ಇರುವುದಿಲ್ಲ. ಕೃಷ್ಣನೂ ಸಹ ಅನೇಕ ಧರ್ಮಗಳು ಇಲ್ಲದಿರುವಾಗ ಬರಬೇಕಾಗುತ್ತದೆ. ಉಳಿದೆಲ್ಲಾ ಆತ್ಮಗಳು ಮುಕ್ತಿಧಾಮದಲ್ಲಿ ಇರುತ್ತಾರೆ. ಭಗವಂತನ ಜೊತೆ ಎಲ್ಲರೂ ಮಿಲನ ಮಾಡಬೇಕಾಗುತ್ತದೆ. ಎಲ್ಲರೂ ತಂದೆಗೆ ತಲೆ ಬಾಗುತ್ತಾರೆ. ತಂದೆಯು ಬಂದು ಪುನಃ ಮಕ್ಕಳಿಗೆ ತಲೆ ಬಾಗುತ್ತಾರೆ. ಮಕ್ಕಳು ಮತ್ತೆ ತಂದೆಗೆ ಮಾಡುತ್ತಾರೆ. ಈ ಸಮಯದಲ್ಲಿ

ತಂದೆಯು ಸಾಕಾರದಲ್ಲಿ ಬಂದಿದ್ದಾರೆ. ಇಲ್ಲಿಂತೂ ಎಲ್ಲಾ ಆತ್ಮಗಳು ತಂದೆಯೊಂದಿಗೆ ಮಿಲನ ಮಾಡಲು ಸಾಧ್ಯವಿಲ್ಲ (ಮಧುಬನದಲ್ಲಿ), ಏಕೆಂದರೆ ಕೋಟಿಯಲ್ಲಿ ಕೆಲವರಷ್ಟೆ ಬರುತ್ತಾರೆ. ಆದುದರಿದ ಎಲ್ಲಾ ಭಕ್ತರು ಯಾವಾಗ ಎಲ್ಲಿ ತಂದೆಯನ್ನು ಮಿಲನ ಮಾಡುವರು? ಎಲ್ಲಿಂದ ಭಗವಂತನನ್ನು ಅಗಲಿದರು ಮತ್ತೆ ಅಲ್ಲಿಗೆ ಹೋಗಿ ಮಿಲನ ಮಾಡುತ್ತಾರೆ. ಭಗವಂತನ ನಿವಾಸ ಸ್ಥಾನ ಪರಮಧಾಮವಾಗಿದೆ. ಎಲ್ಲಾ ಮಕ್ಕಳನ್ನು ದುಃಖದಿಂದ ಬಿಡಿಸಿ ಪರಂಧಾಮಕ್ಕೆ ಕರೆದುಕೊಂಡು ಹೋಗುತ್ತೇನೆಂದು ತಂದೆಯು ತಿಳಿಸುತ್ತಾರೆ. ಈ ಕರ್ತವ್ಯವು ತಂದೆಯೊಬ್ಬರದೇ ಆಗಿದೆ. ತಂದೆಯು ಪತಿತ ಸೃಷ್ಟಿಯನ್ನು ಪಾವನ ಮಾಡಲು ಬರಬೇಕಾಗುತ್ತದೆ. ಸ್ವರ್ಗ ಸ್ಥಾಪಕ ತಂದೆಯೆಂದಾಗ ಅಗತ್ಯವಾಗಿ ಸ್ವರ್ಗ ಸ್ಥಾಪನೆ ಮಾಡಲೇಬೇಕು. ರಾವಣ ನರಕದ ಸ್ಥಾಪನೆ ಮಾಡುತ್ತಾನೆ, ತಂದೆ ಸ್ವರ್ಗ ಸ್ಥಾಪನೆ ಮಾಡುತ್ತಾರೆ. ಇವರ ನಿಜ ಹೆಸರು ಶಿವ, ಬಿಂದು ಆಗಿದೆ. ಆತ್ಮ ಸಹ ಬಿಂದು ಆಗಿದೆ. ಭೃಕುಟಿಯ ಮಧ್ಯದಲ್ಲಿ ಬಿಂದು ರೂಪದಲ್ಲಿ ಇರುತ್ತದೆ. ಆತ್ಮನಂತೆ ಪರಮಾತ್ಮನು ಬಿಂದುವಾಗಿದ್ದಾರೆ. ಆದರೆ ಇಷ್ಟೊಂದು ಚಿಕ್ಕ ಆತ್ಮನಲ್ಲಿ ಎಂದಿಗೂ ಅಳಿಸದಂತಹ ಪಾತ್ರ ತುಂಬಿರುವುದು ಆಶ್ಚರ್ಯದ ಮಾತಾಗಿದೆ. ಇದು ಸದಾ ನಡೆಯುತ್ತಿರುತ್ತದೆ, ಈ ಮಾತುಗಳು ಎಷ್ಟೊಂದು ರಹಸ್ಯವುಳ್ಳ ಮಾತುಗಳಾಗಿವೆ.

ಈಗ ಮನುಷ್ಯರು ಶಾಂತಿಯನ್ನು ಬೇಡುತ್ತಾರೆ ಏಕೆಂದರೆ ಎಲ್ಲರೂ ಶಾಂತಿಯಲ್ಲಿ ಹೋಗುವವರಾಗಿದ್ದಾರೆ. ಸುಖ ಕಾಗವಿಷ್ಟ ಸಮಾನವೆಂದು ಹೇಳುವರು. ಗೀತೆಯಲ್ಲಿ ರಾಜಯೋಗದಿಂದ ರಾಜರಿಗೂ ರಾಜರಾಗಬೇಕೆಂದು ಹೇಳುವವರು ಸುಖ ಕಾಗವಿಷ್ಟ ಸಮಾನವೆಂದು ಹೇಳುವ ಕಾರಣ ಅವರಿಗೆ ಸುಖ ಹೇಗೆ ಸಿಗುತ್ತದೆ. ಇದು ಪ್ರವೃತ್ತಿ ಮಾರ್ಗದ ಮಾತಾಗಿದೆ, ಗೃಹಸ್ಥ ವ್ಯವಹಾರದಲ್ಲಿರುತ್ತಾ ನೀವು ಕಮಲಪುಷ್ಪ ಸಮಾನ ಪವಿತ್ರವಾಗಿರಬೇಕು. ಇದು ಸನ್ಯಾಸಿಗಳ ಕೆಲಸವಲ್ಲ, ಏಕೆಂದರೆ ಅವರು ಮನೆ ಮಠವನ್ನು ಬಿಟ್ಟು ಬಿಡುತ್ತಾರೆ. ನೀವು ಮನೆಯವರಿಗೆ ಮೊಟ್ಟ ಮೊದಲು ದಾನ ಮಾಡಬೇಕು ಎಂದು ಹೇಳುತ್ತೀರಿ. (ಚಾರಿಟಿ ಬಿಗಿನ್ಸ್‌ಅಟ್ ಹೋಂ) ಶಿವ ತಂದೆಯು ಸಹ ನಾನು ಮೊದಲು ಇವರಿಗೆ (ಸಾಕಾರ ಬ್ರಹ್ಮಾ) ತಿಳಿಸಿಕೊಡುತ್ತೇನೆಂದು ಹೇಳುತ್ತಾರೆ. ಶಿವ ತಂದೆಯ ಚೈತನ್ಯ ಮನೆ ಇವರಾಗಿದ್ದಾರೆ. ಮೊದಲು ಇವರು ಕಲಿತು ನಂತರ ಅವರಿಂದ ದತ್ತು ಮಕ್ಕಳು ನಂಬರ್ವಾರ್ ಕಲಿಯುತ್ತಿದ್ದಾರೆ. ಇದು ತುಂಬಾ ರಹಸ್ಯವಾದ ಮಾತುಗಳಾಗಿವೆ. ಸದ್ಗತಿದಾತ ಪತಿತ ಪಾವನನೇ ಬಂದು ಈ ಎಲ್ಲಾ ರಹಸ್ಯಗಳನ್ನು ತಿಳಿಸುತ್ತಾರೆ. ಅಲ್ಲಿಂದಲೇ ಪ್ರೇರಣೆ ಕೊಡುವಂತಿಲ್ಲ, ಅವರು ಇಲ್ಲಿಗೆ ಬರಬೇಕಾಗುತ್ತದೆ. ಇವರ ನೆನಪಾರ್ಥವಾಗಿ ಅನೇಕ ಶಿವನ ಮಂದಿರಗಳಿವೆ. ಸ್ವಯಂ ಅವರೇ ಹೇಳುತ್ತಾರೆ - ನಾನು ಸಾಧಾರಣ ಬ್ರಹ್ಮನ ತನುವಿನಲ್ಲಿ ಬರುತ್ತೇನೆ. ಅವರು ಸ್ವಯಂ ತಮ್ಮ ಜನ್ಮಗಳನ್ನೂ ತಿಳಿದುಕೊಂಡಿಲ್ಲ, ಈ ರೀತಿ ತಿಳಿದುಕೊಳ್ಳದೇ ಇರುವುದು ಅವರೊಬ್ಬರ ಮಾತಲ್ಲ, ನೀವು ಬ್ರಹ್ಮಾ ಮುಖವಂಶಾವಳಿ ಬ್ರಾಹ್ಮಣರೆಲ್ಲರೂ ಕುಳಿತಿದ್ದೀರಿ. ಬ್ರಹ್ಮನ ಮುಖದಿಂದ ನೀವು ಬ್ರಾಹ್ಮಣರು ರಚಿಸಲ್ಪಟ್ಟಿದ್ದೀರಿ. ಬ್ರಾಹ್ಮಣರಾದ ನಿಮಗೆ ತಿಳಿಸಿಕೊಡುತ್ತಾರೆ. ಸದಾ ಬ್ರಾಹ್ಮಣರ ಮೂಲಕವೇ ಯಜ್ಞ ನಡೆಯುತ್ತದೆ. ಆ ಗೀತೆಯನ್ನು ಹೇಳುವಂತಹವರ ಬಳಿ ಬ್ರಾಹ್ಮಣರು ಇಲ್ಲವಾದ್ದರಿಂದ ಅದು ಯಜ್ಞವಾಗುವುದಿಲ್ಲ. ಇದು ಬೇಹದ್ದಿನ ತಂದೆಯಿಂದ ರಚಿಸಲ್ಪಟ್ಟ ಅತ್ಯಂತ ಶ್ರೇಷ್ಠವಾದ ಯಜ್ಞವಾಗಿದೆ. ಇಲ್ಲಿ ಮೊದಲಿನಿಂದಲೂ ದೊಡ್ಡ-ದೊಡ್ಡ ಪಾತ್ರೆಗಳು ಹೆಚ್ಚಾಗುತ್ತಾ ಬಂದಿವೆ. ಭಂಡಾರ ನಡೆಯುತ್ತಲೇ ಇರುತ್ತದೆ, ಸಮಾಪ್ತಿ ಯಾವಾಗ ಆಗುತ್ತದೆ? ಯಾವಾಗ ಇಡೀ ರಾಜಧಾನಿ ಸ್ಥಾಪನೆ ಆಗಿ ಬಿಡುತ್ತದೆ. ನಾನು ನಿಮ್ಮನ್ನು ಮನೆಗೆ ಹಿಂತಿರುಗಿ ಕರೆದುಕೊಂಡು ಹೋಗುತ್ತೇನೆ, ನಂತರ ನಂಬರ್ವಾರ್ ಪಾತ್ರ ಮಾಡಲು ಕಳಿಸುತ್ತೇನೆಂದು ತಂದೆ ತಿಳಿಸುತ್ತಾರೆ. ನಾನು ಹಿಂತಿರುಗಿ ಕರೆದುಕೊಂಡು ಹೋಗುತ್ತೇನೆ. ನಾನು ನಿಮ್ಮ ಮಾರ್ಗದರ್ಶಕನಾಗಿದ್ದೇನೆ – ಈ ರೀತಿ ಬೇರೆ ಯಾರು ತಿಳಿಸಿಕೊಡಲು ಸಾಧ್ಯವಿಲ್ಲ. ಪತಿತ ಮನುಷ್ಯರನ್ನು ಪಾವನ ಮಾಡಿ ಕರೆದುಕೊಂಡು ಹೋಗುತ್ತಾರೆ, ನಂತರ ತಮ್ಮ-ತಮ್ಮ ಧರ್ಮ ಸ್ಥಾಪನೆ ಮಾಡುವ ಸಮಯದಲ್ಲಿ ಪಾತ್ರ ಮಾಡಲು ಆತ್ಮಗಳ ಆಗಮನ ಆರಂಭ ಮಾಡುತ್ತಾರೆ. ಈಗ ಅನೇಕ ಧರ್ಮಗಳಿವೆ, ಬಾಕಿ ಒಂದು ಧರ್ಮ ಮಾತ್ರ ಇಲ್ಲದಾಗಿದೆ. ಗೀತೆಯು ಸರ್ವ ಶಾಸ್ತ್ರಗಳಿಗೆ ಶಿರೋಮಣಿಯಾಗಿದೆ. ಗೀತೆಯಿಂದ ಸರ್ವರಗತಿ ಸದ್ಗತಿ ಆಗುವುದು. ಭಾರತವಾಸಿಗಳಲ್ಲಿಯೂ ಯಾರು ಮೊಟ್ಟ ಮೊದಲು ಪರಮಾತ್ಮನಿಂದ ಅಗಲುತ್ತಾರೆ, ಆ ಆತ್ಮಗಳೇ ಜ್ಞಾನವನ್ನು ಪಡೆದುಕೊಳ್ಳುವರು. ಮೊಟ್ಟ ಮೊದಲು ಅವರೇ ಕೆಳಗೆ ಬರಲು ಇಳಿಯುತ್ತಾರೆ, ನಂತರ ಎಲ್ಲರೂ ನಂಬರ್ವಾರ್ ಬರಬೇಕಾಗುತ್ತದೆ. ಸತೋ, ರಜೋ, ತಮೋವನ್ನು ಎಲ್ಲರು ಅನುಭವ ಮಾಡಿ ಬರಬೇಕಾಗುತ್ತದೆ. ಈಗ ಕಲ್ಪದ ಆಯಸ್ಸು ಪೂರ್ಣವಾಯಿತು. ಎಲ್ಲಾ ಆತ್ಮಗಳು ಇಲ್ಲಿ ಪ್ರತ್ಯಕ್ಷವಾಗಿದ್ದಾರೆ. ತಂದೆಯೂ ಸಹ ಬಂದು ಬಿಟ್ಟಿದ್ದಾರೆ. ಪ್ರತಿಯೊಬ್ಬರೂ ತಮ್ಮ ಪಾತ್ರವನ್ನು ಮಾಡಬೇಕಾಗುತ್ತದೆ. ನಾಟಕದಲ್ಲಿ ಎಲ್ಲಾ ಪಾತ್ರಧಾರಿಗಳು ಒಮ್ಮೆಯೇ ಪಾತ್ರ ಮಾಡಲು ಬರುವುದಿಲ್ಲ. ತಮ್ಮ-ತಮ್ಮ ಸಮಯದಲ್ಲಿ ಬರುತ್ತಾರೆ. ನಂಬರ್ವಾರ್ ಹೇಗೆ ಬರುತ್ತಾರೆ ಎಂಬುದನ್ನು ತಂದೆ ತಿಳಿಸಿಕೊಟ್ಟಿದ್ದಾರೆ. ವರ್ಣಗಳ ರಹಸ್ಯವನ್ನೂ ಸಹ ತಿಳಿಸಿದ್ದಾರೆ. ಬ್ರಾಹ್ಮಣರೇ ಸರ್ವ ಶ್ರೇಷ್ಠ (ಶಿಕೆ) ನಾಗಿದ್ದಾರೆ. ಆದರೆ ಅಂತಹ ಬ್ರಾಹ್ಮಣರನ್ನು ರಚಿಸುವವರು ಯಾರು? ಶುದ್ರರಂತೂ ರಚಿಸಲಾಗುವುದಿಲ್ಲ. ಬ್ರಾಹ್ಮಣರಿಗೂ ಮೇಲೆ ಬ್ರಾಹ್ಮಣರ ತಂದೆ ಬ್ರಹ್ಮಾ ಆಗಿದ್ದಾರೆ, ಬ್ರಹ್ಮಾರವರ ತಂದೆ ಶಿವ ಬಾಬಾ ಆಗಿದ್ದಾರೆ. ನೀವು ಶಿವವಂಶೀ ಬ್ರಹ್ಮಾಮುಖ ವಂಶಾವಳಿ ಆಗಿದ್ದೀರಿ. ನೀವು ಬ್ರಾಹ್ಮಣರಿಂದ ನಂತರ ದೇವತೆಗಳಾಗುತ್ತೀರಿ. ಹೀಗೆ ವರ್ಣಗಳ ಲೆಕ್ಕವನ್ನು ತಿಳಿಸಬೇಕು. ಎಲ್ಲರೂ ಒಂದೇ ರೀತಿ ಬುದ್ಧಿವಂತರಲ್ಲದ ಕಾರಣ ತಂದೆಯು ಮಕ್ಕಳಿಗೆ ಸಲಹೆಯನ್ನು ನೀಡುತ್ತಾರೆ. ವಿದ್ವಾನ್ ಪಂಡಿತರ ಮುಂದೆ ಯಾವುದೇ ಹೊಸ ಮಕ್ಕಳು ತಿಳಿಸಿಕೊಡಲಾಗುವುದಿಲ್ಲ. ನಾನು ಹೊಸಬನಾಗಿದ್ದೇನೆ ತಾವು ಇಂತಹ ಸಮಯದಲ್ಲಿ ಬರುವುದಾದರೆ ನಮಗಿಂತ ಹಿರಿಯ ಸಹೋದರಿ ನಿಮಗೆ ತಿಳಿಸಿಕೊಡುತ್ತಾರೆಂದು ಹೇಳಬೇಕಾಗುತ್ತದೆ. ಅವರು ನನಗಿಂತ ಮುಂದೆ ಇದ್ದಾರೆ, ಶಾಲೆ ಎಂದರೆ ನಂಬರ್ವಾರ್ ಇರುತ್ತದೆ.

ಇದರಲ್ಲಿ ದೇಹಾಭಿಮಾನ ಬರಬಾರದು. ಇಲ್ಲವಾದರೆ ಗೌರವವನ್ನು ಕಳೆದುಕೊಳ್ಳುತ್ತೇವೆ. ಬ್ರಹ್ಮಾಕುಮಾರ-ಕುಮಾರಿಯರು ಪೂರ್ಣವಾಗಿ ತಿಳಿಸಿಕೊಡುವುದಿಲ್ಲವೆಂದು ಹೇಳಿ ಬಿಡುತ್ತಾರೆ. ದೇಹಾಭಿಮಾನವನ್ನು ಬಿಟ್ಟು ಹಿರಿಯರಿಗೆ ಒಪ್ಪಿಸಬೇಕು, ತಂದೆಯು ಸಹ ನನಗಿಂತ ಮೇಲೆ ತಂದೆಯನ್ನು ಕೇಳುತ್ತೇನೆಂದು ಹೇಳುತ್ತಾರೆ. ಮಹಾರಥಿ, ಕುದುರೆ ಸವಾರ, ಕಾಲಾಳುಗಳು ಇರುತ್ತಾರಲ್ಲವೇ. ಕೆಲವರನ್ನು ಹುಲಿಯ ಮೇಲೆ ಸವಾರಿ ತೋರಿಸುತ್ತಾರೆ. ಹುಲಿಯು ಎಲ್ಲದಕ್ಕಿಂತ ಶಕ್ತಿಶಾಲಿಯಾಗಿದ್ದು ಚುರುಕಾಗಿರುತ್ತದೆ. ಕಾಡಿನಲ್ಲಿ ಒಂಟಿಯಾಗಿರುತ್ತದೆ ಆದರೆ ಆನೆಯು ಸದಾ ಆನೆಗಳ ಹಿಂಡಿನಲ್ಲಿ ಇರುತ್ತದೆ. ಏಕೆಂದರೆ ಒಂಟಿಯಾಗಿದ್ದರೆ ಯಾರಾದರೂ ಕೊಂದು ಬಿಡುತ್ತಾರೆ ಎಂಬ ಭಯವಿರುತ್ತದೆ. ಶಕ್ತಿಯರನ್ನು ಸಹ ಹುಲಿಯ ಮೇಲೆ ಸವಾರಿಯಾಗಿ ತೋರಿಸುತ್ತಾರೆ.

ಗೀತೆಯ ಭಗವಂತ ಕೃಷ್ಣನೆಂದು ಹೇಳುವುದು ತಪ್ಪಾಗಿದೆ ಎಂದು ಮಕ್ಕಳಿಗೆ ತಿಳಿಸಲಾಗಿದೆ. ಕೃಷ್ಣನ ಶಾಸ್ತ್ರವನ್ನು ಎಲ್ಲಾ ಧರ್ಮದವರು ಮಾನ್ಯತೆ ಕೊಡುವುದಿಲ್ಲ. ಪ್ರಾಚೀನ ದೇವೀ-ದೇವತಾ ಧರ್ಮದ ಸ್ಥಾಪನೆ ಯಾರು ಮಾಡಿದರೆಂದು ಸಿದ್ಧ ಮಾಡಿ ತಿಳಿಸಬೇಕು. ಅವರಿಗೆ ದೇವೀ-ದೇವತೆ ಎಂದು ಕರೆಯಲಾಗುವುದು, ಈಶ್ವರನಂತೂ ಬೇರೆ ಆಗಿದ್ದಾರೆ. ಲಕ್ಷ್ಮೀ-ನಾರಾಯಣರಿಗೆ ಭಗವಾನ್-ಭಗವತಿ ಎಂದು ಹೇಳುತ್ತಾರೆ, ಇವರು ಪಾಲನೆಗೆ ನಿಮಿತ್ತನಾಗಿದ್ದಾರೆ. ಒಂದುವೇಳೆ ಲಕ್ಷ್ಮೀ ನಾರಾಯಣರಿಗೆ ಭಗವಾನ್ ಭಗವತಿ ಎಂದು ಹೇಳುವುದಾದರೆ ವಿಷ್ಣು ಶಂಕರನಿಗೂ ಮೊದಲಿಗೆ ಭಗವಾನ್ ಎಂದು ಹೇಳಬೇಕಾಗುತ್ತದೆ. ಭಗವಂತನಲ್ಲದೆ ಗೀತೆಯನ್ನು ಬೇರೆ ಯಾರು ಹೇಳಲು ಸಾಧ್ಯವಿಲ್ಲವೆಂದು ನೀವು ತಿಳಿದುಕೊಂಡಿದ್ದೀರಿ. ಭಗವಂತನ ಮುಖದಿಂದ ಉಚ್ಛರಿಸಲ್ಪಟ್ಟ ಗೀತೆಯಾಗಿದೆ. ಶ್ರೀ ಶ್ರೀ ರುದ್ರನ ಗೀತೆಯಾಗಿದೆ. ಇವರನ್ನು ಬೇರೆ ಯಾರೂ ತಮ್ಮ ಮುಖವನ್ನಾಗಿ ಮಾಡಿಕೊಳ್ಳಲಾಗುವುದಿಲ್ಲ. ಗೀತೆಯು ಶಿವ ತಂದೆಯ ವಿನಃ ಬೇರೆ ಯಾರ ಮುಖದಿಂದಲೂ ಉಚ್ಚರಿಸಲಾಗುವುದಿಲ್ಲ. ಗೀತಾ ಮಾತೆಯಾಗಿದೆ. ಶಿವ ತಂದೆ ಅದರ ರಚೈತನಾಗಿದ್ದಾರೆ. ಅವರು ಕುಳಿತು ಮುಖದಿಂದ ತಿಳಿಸಿಕೊಡುತ್ತಾರೆ, ಏಕೆಂದರೆ ಅವರು ಜ್ಞಾನ ಸಾಗರನಾಗಿದ್ದಾರೆ. ಅಂದಾಗ ಚೈತನ್ಯನೇ ತನ್ನ ರಚನೆಯ ಜ್ಞಾನವನ್ನು ಕೊಡಬೇಕಾಗುತ್ತದೆ. ಆದುದರಿಂದ ಋಷಿ ಮುನಿಗಳೆಲ್ಲರೂ ಬೇಹಂತ್ ಎಂದು ಹೇಳಿ ಬಿಡುತ್ತಾರೆ. ಈಶ್ವರನ ಗತಿ ಮತಿಯನ್ನು ಈಶ್ವರನೇ ತಿಳಿದುಕೊಂಡಿದ್ದಾರೆ. ಈಗ ಈಶ್ವರನ ಮತ ಶ್ರೀಮತವಾಗಿದೆ. ಇದರಿಂದ ಸದ್ಗತಿ ಸಿಗುತ್ತದೆ. ಅಂದಾಗ ಇದು ಸರಿಯಿದೆಯಲ್ಲವೇ. ಗತಿಯ ಜೊತೆ ಸದ್ಗತಿಯೆಂದು ಎರಡನ್ನು ಹೇಳಬೇಕಾಗುತ್ತದೆ ಏಕೆಂದರೆ ಭಾರತದಲ್ಲಿ ಯಾವಾಗ ಸ್ವರ್ಗವಿರುತ್ತದೆ, ಆಗ ಉಳಿದೆಲ್ಲಾ ಧರ್ಮದವರು ಮುಕ್ತಿಯಲ್ಲಿ ಇರುತ್ತಾರೆ. ಭಾರತವಾಸಿಯರು ಸದ್ಗತಿ ಅರ್ಥಾತ್ ಜೀವನ್ಮುಕ್ತಿಯಲ್ಲಿ ಇದ್ದರು. ಈ ಎಲ್ಲಾ ಮಾತುಗಳು ಧಾರಣೆ ಮಾಡುವ ರಹಸ್ಯಗಳನ್ನು ತಂದೆ ತಿಳಿಸಿಕೊಡುತ್ತಾರೆ. ವೇದ ಶಾಸ್ತ್ರ ಮುಂತಾದುವುಗಳಿಂದ ಈಶ್ವರನ ದಾರಿ ಸಿಗುತ್ತದೆ ಎಂದು ಭಕ್ತಿ ಮಾರ್ಗದಲ್ಲಿ ಹೇಳುತ್ತಾರೆ. ಆದರೆ ಆ ರೀತಿಯಂತೂ ಸಾಧ್ಯವಿಲ್ಲ. ಯಾವ ಕಡೆಯಿಂದ ಹೋದರು ತಲುಪು ಬಿಡುತ್ತಾರೆಂದು ಹೇಳಲು ಇದು ಸಿಮ್ಲಾ ಪರ್ವತವೇನು! ಇಲ್ಲಿಯಂತೂ ಪ್ರಿಯತಮೆಯರ ಬಳಿ ಬರಬೇಕಾಗುತ್ತದೆ. ಅದಕ್ಕಾಗಿ ಸ್ವರ್ಗದ ಮಾಲೀಕರನ್ನಾಗಿ ಮಾಡಲು ಶೃಂಗಾರ ಮಾಡಬೇಕು. ಎಲ್ಲರೂ ಮಹಾರಾಜ-ಮಹಾರಾಣಿ ಆಗಲು ಇಷ್ಟ ಪಡುತ್ತಾರೆ ಆದರೆ ತಂದೆ ತಿಳಿಸುತ್ತಾರೆ-ತಮ್ಮ ಮುಖವನ್ನು ಮೊದಲು ನೋಡಿಕೊಳ್ಳಬೇಕು. ನಾರದನ ಮಾತೂ ಸಹ ಈ ಸಮಯದ್ದಾಗಿದೆ. ನಾರದನಿಗೆ ಲಕ್ಷ್ಮೀಯನ್ನು ವರಿಸಲು ಮನಸ್ಸಾಯಿತು, ಆಗ ಲಕ್ಷ್ಮಿಯು ನಾರದನಿಗೆ ತನ್ನ ಮುಖವನ್ನು ನೋಡಿಕೊಳ್ಳಲು ಹೇಳಿದಳು. ತಂದೆಯೂ ಸಹ ತಮ್ಮ ಮನಸ್ಸೆಂಬ ದರ್ಪಣವನ್ನು ನೋಡಿಕೊಳ್ಳಲು ತಿಳಿಸುತ್ತಾರೆ. ಕಾಮದ ಭೂತ ಬರುವುದಿಲ್ಲವೇನು? ಪರಿಶೀಲನೆ ಮಾಡಿಕೊಳ್ಳುತ್ತಾ ಭೂತಗಳನ್ನು ದೂರ ಮಾಡುವ ಪ್ರಯತ್ನ ಮಾಡುತ್ತಾ ಇರಿ. ತಂದೆಯು ಎಲ್ಲಾ ಉಪಾಯಗಳನ್ನು ತಿಳಿಸುತ್ತಿರುತ್ತಾರೆ. ಮನದಲ್ಲಿ ಎಷ್ಟೇ ಸಂಕಲ್ಪ ಬಂದರೂ ಕರ್ಮದಲ್ಲಿ ಬರಬಾರದು. ತಂದೆಯು ಉತ್ತಮ ಕರ್ಮವನ್ನು ಕಲಿಸಿಕೊಡುತ್ತಾರಲ್ಲವೇ. ಕರ್ಮ-ಅಕರ್ಮ-ವಿಕರ್ಮದ ಜ್ಞಾನವೂ ಸಹ ಗೀತೆಯಲ್ಲಿದೆ, ಆದರೆ ಅದನ್ನು ಯಾರೂ ತಿಳಿದುಕೊಂಡಿಲ್ಲ. ವಿಕರ್ಮ ಮಾಡಿಸುವುದು ಮಾಯೆ, ಅದು ಸತ್ಯಯುಗದಲ್ಲಿ ಇರುವುದಿಲ್ಲ. ಈಗ ನೀವು ಶ್ರೀಮತದಂತೆ ನಡೆದಾಗ ಸ್ವರ್ಗದಲ್ಲಿ ಹೋಗಬಹುದು. ಇದು ಯಾವ ಮನುಷ್ಯನ ಮತವಲ್ಲ, ತಂದೆಯ ಶ್ರೀಮತದಿಂದ ಸ್ವರ್ಗವಾಗುತ್ತಿದೆ. ಬೇರೆಯವರ ಮತದಿಂದ ಸ್ವರ್ಗವಾಗಲು ಸಾಧ್ಯವಿಲ್ಲ, ಇನ್ನೂ ಭ್ರಷ್ಟವಾಗುತ್ತಾ ಹೋಗುತ್ತದೆ.

ಈಗ ಒಂದು ಧರ್ಮದ ಸ್ಥಾಪನೆ ಆಗುತ್ತಿದೆ ಎಂದು ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ಯೋಗ ಬಲದಿಂದ ನೀವು ಗುಪ್ತ ವೇಷದಲ್ಲಿ ರಾಜಧಾನಿ ಸ್ಥಾಪನೆ ಮಾಡುತ್ತಿರುವಿರಿ. ಕೈಯಲ್ಲಿ ಆಯುಧ ಮುಂತಾದವುಗಳೇನೂ ಇಲ್ಲ. ಜ್ಞಾನವೇ ಬಾಣವಾಗಿದೆ. ಅವರು ಸ್ಥೂಲವಾಗಿ ತೋರಿಸಿ ಬಿಟ್ಟಿದ್ದಾರೆ. ಇದೆಲ್ಲವೂ ಗುಪ್ತ ಶಕ್ತಿಯಾಗಿದೆ. ಶಕ್ತಿಯರಿಗೆ ಎಷ್ಟೊಂದು ಪೂಜೆ ನಡೆಯುತ್ತದೆ. 10-20 ಭುಜಗಳಿರುವವರು ಯಾರೂ ಇಲ್ಲ. ಎಲ್ಲರಿಗೂ ಎರಡೇ ಭುಜಗಳಿರುತ್ತವೆ. ಮನುಷ್ಯ ಸೃಷ್ಟಿಯಲ್ಲಿ 8-10 ಭುಜಧಾರಿಗಳು ಯಾರೂ ಇಲ್ಲ. ಸೂಕ್ಷ್ಮವತನದಲ್ಲಿ ವಿಷ್ಣುವಿಗೆ ನಾಲ್ಕು ಭುಜಗಳನ್ನು ತೋರಿಸುತ್ತಾರೆ, ಅದೂ ಸಹ ಅರ್ಥ ಸಹಿತವಾಗಿದೆ. ಬೀಜವನ್ನು ತಿಳಿಯುವದರಿಂದ ವೃಕ್ಷದ ಜ್ಞಾನವೆಲ್ಲವೂ ಬಂದು ಬಿಡುತ್ತದೆ.

ಒಳ್ಳೆಯದು. ಜ್ಞಾನದ ಖಜಾನೆಯಂತೂ ಮಕ್ಕಳಿಗೆ ಸಿಗುತ್ತಿರುತ್ತದೆ, ಆದರೆ ಮುಖವನ್ನು ಸಿಹಿ ಮಾಡುವ ಸಲುವಾಗಿ ಮಕ್ಕಳಿಗೆ ಸಿಹಿಯನ್ನು ತಿನ್ನಿಸುತ್ತಾರೆ. ಸ್ವಯಂ ಶಿವ ತಂದೆ ತಿನ್ನುವುದಿಲ್ಲ, ಎಲ್ಲವೂ ಮಕ್ಕಳಿಗೋಸ್ಕರವಾಗಿದೆ. ರಾಜ್ಯವೂ ಸಹ

ಮಕ್ಕಳಿಗಾಗಿಯೇ ಆಗಿದೆ. ಲಕ್ಷ್ಮೀ ನಾರಾಯಣರೂ ಸಹ ರಾಜ್ಯವನ್ನು ತನ್ನ ಮಕ್ಕಳಿಗೆ ಕೊಡುತ್ತಾರೆ. ಅವರು ಎಲ್ಲರಿಗೂ ಹಂಚುವುದಿಲ್ಲ, ಈ ತಂದೆ ತನ್ನ ಎಲ್ಲಾ ಮಕ್ಕಳಿಗೂ ರಾಜ್ಯವನ್ನು ಕೊಡುತ್ತಾರೆ. ಅಲ್ಲಿ ಪ್ರಜೆಗಳೂ ಸಹ ನಾವು ಸ್ವರ್ಗದ ಮಾಲೀಕರೆಂದು ಹೇಳುತ್ತಾರೆ. ಪ್ರಜೆಗಳಿಗೂ ಸುಖವಿರುತ್ತದೆ. ದುಃಖದ ಹೆಸರೇ ಇರುವುದಿಲ್ಲ. ಬಾಕಿ ನಂಬರ್ವಾರಂತೂ ಇದ್ದೇ ಇರುತ್ತಾರೆ. ಅಲ್ಲಿ ಅಪಾರವಾದ ಚಿನ್ನವಿರುತ್ತದೆ. ಇಲ್ಲಿ ಎಲ್ಲಾ ಗಣಿಗಳು ಖಾಲಿಯಾಗಿ ಬಿಟ್ಟಿವೆ. ಆದುದರಿಂದ ಕೆಲವರ ಸಂಪತ್ತು ಮಣ್ಣು ಪಾಲಾಯಿತು, ಕೆಲವರ ಸಂಪತ್ತು ರಾಜರು ತಿಂದು ಖಾಲಿ ಮಾಡಿದರೆಂಬ ಗಾಯನವಿದೆ.....

ಒಳ್ಳೆಯದು. ಮಧುರ-ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾ-ಪಿತಾ ಬಾಪ್ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ. ಮಾತೆಯರಿಗೆ ವಂದೇ ಮಾತರಂ. ಮಕ್ಕಳಿಗೆ ನೆನಪು-ಪ್ರೀತಿ ಹಾಗೂ ಎಲ್ಲರಿಗೂ ಸುಪ್ರಭಾತ. ಈಗ ರಾತ್ರಿ ಪೂರ್ಣವಾಗುತ್ತಿದೆ. ಸುಪ್ರಭಾತ ಬರುತ್ತಿದೆ. ಬ್ರಹ್ಮಾಕುಮಾರ-ಕುಮಾರಿಯರ ಸಲುವಾಗಿ ನವಯುಗ ಬರುತ್ತಿದೆ. ಒಳ್ಳೆಯದು. ಓಂ ಶಾಂತಿ.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ದೇಹಾಭಿಮಾನವನ್ನು ಬಿಟ್ಟು ತಮಗಿಂತ ಹಿರಿಯರನ್ನು ಮುಂದಿಡಬೇಕು. ಯಾರಾದರು ಚರ್ಚೆ ಮಾಡುತ್ತಾರೆಂದರೆ ಅವರನ್ನು ದೊಡ್ಡವರಿಗೆ ಒಪ್ಪಿಸಬೇಕು. ಗೌರವ ಕಳೆಯಬಾರದು.

2. ಮೊಟ್ಟ ಮೊದಲು ಮನೆಯವರಿಗೆ ದಾನ ಮಾಡಬೇಕು (ಚಾರಿಟಿ ಬಿಗಿನ್ಸ್ ಎಟ್ ಹೋಂ). ಮೊದಲು ಪರಿವಾರದ ಕಲ್ಯಾಣ ಮಾಡಬೇಕು. ಗೃಹಸ್ಥದಲ್ಲಿ ಇರುತ್ತಾ ಕಮಲ ಪುಷ್ಪ ಸಮಾನ ಪವಿತ್ರರಾಗಿರಬೇಕು.

ವರದಾನ: ದೇಹ-ಅಹಂಕಾರ ಅಥವಾ ಅಭಿಮಾನದ ಸೂಕ್ಷ್ಮ ಅಂಶಗಳನ್ನೂ ತ್ಯಾಗ ಮಾಡುವಂತಹ ಆಕಾರಿಯಿಂದ ನಿರಾಕಾರಿ ಭವ.

ಕೆಲವರಲ್ಲಿ ಚಿಕ್ಕ ರೂಪದಿಂದ ದೇಹದ ಆಕಾರದಲ್ಲಿ ಸೆಳೆತ ಅಥವಾ ಅಭಿಮಾನವಿಲ್ಲ ಆದರೆ ದೇಹದ ಸಂಬಂಧದೊಂದಿಗೆ ತನ್ನ ಸಂಸ್ಕಾರ ವಿಶೇಷವಾಗಿದೆ, ಬುದ್ಧಿ ವಿಶೇಷವಾಗಿದೆ, ಗುಣ-ಕಲೆಗಳು ವಿಶೇಷವಾಗಿದೆ, ಕೆಲವು ಶಕ್ತಿ ವಿಶೇಷವಾಗಿದೆ ಎಂಬ ಅಭಿಮಾನ ಅರ್ಥಾತ್ ಅಹಂಕಾರ, ನಶೆ, ಆವೇಶ - ಇವು ಸೂಕ್ಷ್ಮವಾದ ದೇಹ-ಅಭಿಮಾನವಾಗಿದೆ. ಹಾಗಾದರೆ ಈ ಅಭಿಮಾನವೆಂದಿಗೂ ಆಕಾರಿ ಫರಿಶ್ತಾ ಅಥವಾ ನಿರಾಕಾರಿಯಾಗಲು ಬಿಡುವುದಿಲ್ಲ. ಆದ್ದರಿಂದ ಇದರ ಅಂಶವನ್ನೂ ತ್ಯಾಗ ಮಾಡುತ್ತೀರೆಂದರೆ ಸಹಜವಾಗಿಯೇ ಆಕಾರಿಯಿಂದ ನಿರಾಕಾರಿಯಾಗಲು ಸಾಧ್ಯವಿದೆ.

ಸ್ಲೋಗನ್: ಸಮಯದಲ್ಲಿ ಸಹಯೋಗಿ ಆಗುತ್ತೀರೆಂದರೆ ಪದಮಪಟ್ಟು ರಿಟರ್ನ್ ಸಿಕ್ಕಿ ಬಿಡುವುದು.